6) ಸುಳ್ಯ ತಾಲ್ಲೂಕು ಜಾಲ್ಲೂರು ಎಂಬಲ್ಲಿ ದರಖಾಸ್ತು ಮೂಲಕ ಮಂಜೂರಾದ ಭೂಮಿಯನ್ನು ಅರಣ್ಯ ಇಲಾಖೆಯವರು ಬಲಾತ್ಕಾರವಾಗಿ ಆಕ್ರಮಿಸಿಕೊಂಡಿರುವುದು

ಶ್ರೀ ಕೆ. ಕುಶಲ (ಸುಳ್ಯ).— ಮಾನ್ಯ ಅಧ್ಯಕ್ಷರೇ, ಸುಳ್ಯ ತಾಲ್ಲೂಕಿನ ಜಾಲ್ಲೂರು ಎಂಬಲ್ಲಿ ವಾಸ್ತವಿಸಿಕೊಂಡು ಬರುತ್ತಿರುವ ಬಡ ಪರಿಶಿಷ್ಟ ಜಾತಿಯ ಶ್ರೀ ಎ. ಐತ ಎಂಬುವುಗೆ ದರಖಾಸ್ತು ಮಂಜೂರಾದ ಸ. ನಂಬ್ರ ೩೭೧-೧೬ಬಿಯಲ್ಲಿ ೧-೮೦ ಎಕ್ರೆ ಜಮೀನು ಇದ್ದು, ಈ ಜಮೀನು ಅರಣ್ಯ ಇಲಾಖೆಯಿಂದ ಸುಮಾರು ಅರ್ಧ ಕಿಲೋಮೀಟರ್ ದೂರದಲ್ಲಿ ಬರುವುದು. ಅರಣ್ಯ ಇಲಾಖೆಯವರು ಇಲಾಖೆಯ ಜಮೀನಿನಲ್ಲಿ ಕೆಲವು ವರ್ಷಗಳ ಹಿಂದೆಯೇ ಗೇರು ಕೃಷಿ ಮಾಡಿರುತ್ತಾರೆ. ಹೀಗಿರುವಾಗ ಬಡ ಪರಿಶಿಷ್ಟ ಜಾತಿಯ ಐತ ಎಂಬುವರು ಈಗ ಕಳೆದ ೧೦-೧೫ ದಿನಗಳ ಹಿಂದೆ ನಿರ್ಮಿಸಿದ ಮಣ್ಣಿ ಹಾಮಣೆಯ ಮನೆಯನ್ನು ಸದ್ರಿ ವಿಭಾಗದ ಅರಣ್ಯ ಇಲಾಖೆಯ ಅರಣ್ಯ ಪಾಲಕರ ನಾಲ್ಕು ಜನರು ಬಂದು ಬಲಾತ್ಕಾರವಾಗಿ ದರಕಾಸ್ತು ಜಮೀನಿನ ಕಟ್ಟಡವನ್ನು ಸಂಪೂರ್ಣವಾಗಿ ಕೆಡವಿ ಹಾಕಿರುತ್ತಾರೆ ಕೆಡವಿ ಹಾಕಿದ ಬಗ್ಗೆ ಅರಣ್ಯ ಇಲಾಖೆಯವರನ್ನು ವಿಚಾರಿಸಿದಾಗ ಅವರ ಜಮೀನೇ ಇಲ್ಲ. ಅರಣ್ಯ ಇಲಾಖೆಯ ಜಮೀನೇ ಎಂದು ಅಳತೆಯಿಂದ ತಿಳಿಯಲು ಕಂದಾಯ ಇಲಾಖೆಯ ತಾಲ್ಲೂಕಿನ ತಹಸೀಲ್ದಾರರಿಗೆ ಬರಕೊಂಡಿದೆ ಎಂದು ತಿಳಿಸಿರುವರು. ಇಲಾಖೆಯ ಜಮೀನು ಅಥವಾ ದರಖಾಸ್ತುದಾರನಿಗೆ ಸಂಬಂಧಿಸಿದ ಜಮೀನೇ ಎಂದು ಇತ್ಯರ್ಥವಾಗುವುದಕ್ಕೆ ಮೊದಲು, ಸದ್ರಿ ಬಡ ಪಾಯಿಯ ಮನೆಯನ್ನು ಕೆಡವಿ ಹಾಕುವ ಔಚಿತ್ಯವಾದರೂ ಏನು ? ಈಗ ಸದ್ರಿ ಬಡ ಪರಿಶಿಷ್ಟ ಜಾತಿ ಫಲಾನುಭವಿಗೆ ಕಟ್ಟಿದ ಮನೆಗೆ ಸುಮಾರು ಕಡಿಮೆ ಪಕ್ಷ ೪-೫ ಸಾವಿರ ರೂಪಾಯಿ ನಷ್ಟವಾಗಿರುತ್ತದೆ. ಅಲ್ಲದೆ ಮಳೆಗಾಲ ಸಮೀಪಿಸುತ್ತಿರುವುದರಿಂದ. ಈ ಬಡಪಾಯಿಗೆ ವಾಸ್ತವ್ಯಕ್ಕೆ ಮನೆ ಇಲ್ಲದೆ ಬೀದಿ ಪಾಲಾಗುವ ಪರಿಸ್ಥಿತಿ ಒದಗಿರುವುದು. ಈ ಕುರಿತು ಸದ್ರಿ ಮನೆ ಕೆಡವಿದ ಅರಣ್ಯ ಪಾಲಕರು (೪ ಜನರು)ಗಳ ಮೇಲೆ ಸೂಕ್ತ ಕ್ರಮ ಕೈಗೊಂಡು ನಿರ್ಗತಿಕ ಮನೆ ಕಳಕೊಂಡವರಿಗೆ ಕೂಡಲೇ ತಾತ್ಕಾಲಿಕ ಪರಿಹಾರ ಕೂಡ ನೀಡುವಂತೆ ನಾನು ಸರ್ಕಾರವನ್ನು ಈ ಮೂಲಕ ಒತ್ತಾಯಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ, ಯೋಜನೆ ಮಂತ್ರಿ).— ಮಾನ್ಯ ಅರಣ್ಯ ಇಲಾಖೆಯ ಮಂತ್ರಿಗಳ ಗಮನಕ್ಕೆ ಈ ವಿಷಯವನ್ನು ತಂದು ಇದರ ಬಗ್ಗೆ ಸೂಕ್ತ ಕ್ರಮವನ್ನು ಕೂಡಲೇ ಕೈಗೊಳ್ಳುವಂತೆ ಹೇಳುತ್ತೇನೆ.

7) ರಾಜ್ಯದ ಹೋಟೆಲುಗಳಲ್ಲಿ ಊಟ ತಿಂಡಿಗಳ ದರವನ್ನು ಪರಿಷ್ಕರಿಸುವುದು

ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ).— ಮಾನ್ಯ ಅಧ್ಯಕ್ಷರೇ, ಕರ್ನಾಟಕದಲ್ಲಿ ಹೋಟೆಲ್, ಊಟ ತಿಂಡಿ ಮತ್ತು ವಸತಿ ದರಗಳನ್ನು ಪರಿಷ್ಕರಿಸುವ ಬಗ್ಗೆ ಸರ್ಕಾರವು ಗಮನ ಸೆಳೆಯುತ್ತಾ ಈ ಕೆಳಕಂಡಂತೆ ಹೇಳಿಕೆ ನೀಡಲು ಬಯಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ. ಬೇರೆ ಯಾವುದೇ ರಾಜ್ಯಗಳಲ್ಲೂ ಇಲ್ಲದ ಹೋಟೆಲ್ ಊಟ, ತಿಂಡಿ, ತಿನಸುಗಳು ಮತ್ತು ವಸತಿ ದರಗಳನ್ನು ಲಂಗುಲಗಾಮಿಲ್ಲದೆ, ಸ್ವೇಚ್ಛಾನುಸಾರವಾಗಿ ಏರುತ್ತಲೇ ಇರುತ್ತವೆ. ಅದರಲ್ಲೂ ಬೆಂಗಳೂರು, ಮೈಸೂರು ಮುಂತಾದ ನಗರ ಪ್ರದೇಶಗಳಲ್ಲೂ ಇತಿಮಿತಿ ಇಲ್ಲದ ರೀತಿಯಲ್ಲಿ ದಿನನಿತ್ಯ ನಡೆದು ಕೊಂಡು ಹೋಗುತ್ತಿವೆ. ಬಹಿರಂಗ ಮಾರುಕಟ್ಟೆಯಲ್ಲಿ ಮತ್ತು ನಿಯಂತ್ರಿತ ದರದಲ್ಲಿ ಯಾವ ತೊಂದರೆಯೂ ಇಲ್ಲದೆ ಅಗತ್ಯ ವಸ್ತುಗಳು ನ್ಯಾಯಯುತವಾದ ಬೆಲೆಗೆ ಲಭ್ಯವಿದ್ದರೂ ಲಾಭ ಮಾಡುವ ಒಂದೇ ದೃಷ್ಟಿಯಲ್ಲಿಟ್ಟುಕೊಂಡು, ಗ್ರಾಹಕರಿಗೆ ತೃಪ್ತಿಕರವಾದ ಊಟ ತಿಂಡಿ, ವಸತಿ ಒದಗಿಸುತ್ತಿರುವುದಿಲ್ಲ. ಮತ್ತು ತಾವು ಹಳಿಯುವ ಅತ್ಯಂತ ಹೇರಳ ಲಾಭದ ಅಂಕಿ ಸಂಖ್ಯೆಗಳನ್ನು ಮರೆ ಮಾಡಿ, ಸರ್ಕಾರಕ್ಕೆ ಮೋಸ ಮಾಡುತ್ತಿದ್ದಾರೆ. ಈ ಎಲ್ಲಾ ಅಂಶಗಳನ್ನೂ ಗಮನದಲ್ಲಿಟ್ಟುಕೊಂಡು ಉತ್ತಮ ಗುಣ ಮಟ್ಟದ ಊಟ, ತಿಂಡಿ, ವಸತಿ ಸೌಕರ್ಯಗಳನ್ನು ಪರಿಷ್ಕೃತಗೊಳಿಸಿ ಸರಬರಾಜು ಮಾಡಲು ಸರ್ಕಾರ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ಕೋರುತ್ತೇನೆ.